**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 288/2018

ಪಿ.ಡಬ್ಲ್ಯೂ : 1 ಸಿ.ಡಬ್ಲ್ಯೂ 1

ಸಾಕ್ಷಿಗೆ ಇಂದು ದಿನಾಂಕಃ 24-07-2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಬಿ ವಕೀಲರಿಂದ**

ಘಟನೆ ಆದಾಗ ಎಲ್ಲಿ ಇದ್ದೀರಿ ಎಂದರೆ ಸಾಕ್ಷಿ ಕೆಲಸಕ್ಕೆ ಹೋಗಿದ್ದೆ ಎಂದು ನುಡಿದಿರುತ್ತಾರೆ. ನಮಗೆ ಮದ್ಯಾಹ್ನ 3 ಗಂಟೆಗೆ ವಿಷಯ ಗೊತ್ತಾಗಿರುತ್ತದೆ. ವಿಷಯ ಗೊತ್ತಾದ ನಂತರ ಶಾಲೆ ಹತ್ತಿರ ಬಂದಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿ ಮದ್ಯಾಹ್ನ 3 ಗಂಟೆ ಆಗಿತ್ತು ಎಂದು ನುಡಿದಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಶಾಲೆಯ ಮೈದಾನದಲ್ಲಿ ಏನು ಇತ್ತು ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ಅಪಘಾತ ಹೇಗೆ ಆಗಿರುತ್ತದೆ ಎಂದು ಗೊತ್ತಾಗಿರುತ್ತದೆಯೇ ಸಾಕ್ಷಿ ಶಾಲೆಯ ಶಿಕ್ಷಕರು ಅಪಘಾತ ಹೇಗೆ ಆಗಿರುತ್ತದೆ ಎಂದು ಹೇಳಿದ್ದು ಅವರ ಹೆಸರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಅಪಘಾತ ಆಗಿರುವ ಸ್ಥಳ ಉರ್ದು ಶಾಲೆ ಇದ್ದು ಸುತ್ತಲು ಕಂಪೌಂಡ್ ಇರುತ್ತದೆ ಎಂದರೆ ಸರಿ. ಹಾಗಾಗಿ ಬೇರೆ ವಾಹನಗಳು ಅಲ್ಲಿ ಓಡಾಡುವುದಿಲ್ಲ ಎಂದರೆ ಸಾಕ್ಷಿ ಪೂರ್ಣ ಕಂಪೌಂಡ ನಿರ್ಮಾಣ ಇರುವುದಿಲ್ಲ ಶಾಲೆಯ ಹಿಂಭಾಗದಲ್ಲಿ ಮೈದಾನ ಇರುತ್ತದೆ ಎಂದು ನುಡಿದಿರುತ್ತಾರೆ. ತಮ್ಮ ಮಗ ಆಟದ ಮೈದಾನದಲ್ಲಿ ವಾಲಿಬಾಲ್ ಆಡುತ್ತಿದ ಎಂದು ಹೇಳಿದ್ದು ಯಾರೊಂದಿಗೆ ಆಡುತ್ತಿದ್ದ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಅವರ ಹೆಸರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಘಟನಾ ಸ್ಥಳದ ಚೆಕ್ಕುಬಂದಿ ಕೇಳಲಾಗಿ ಪೂರ್ವಕ್ಕೆ ಶಾಲೆ, ದಕ್ಷಿಣಕ್ಕೆ ಇದ್ಗಾ ಮೈದಾನ ಉತ್ತರಕ್ಕೆ ರಸ್ತೆ, ಪಶ್ಚಿಮಕ್ಕೆ ಆಟದ ಮೈದಾನ. ಶಾಲೆಯಲ್ಲಿ ವಾಲಿಬಾಲ್ ಮೈದಾನ

ಇರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ವಾಲಿಬಾಲ್‌ಆಟದ ಮೈದಾನ ಇದ್ದರೆ ಪೋಲಿಸರು ತನಿಖೆಗೆ ಕಾಲಕ್ಕೆ ಪೋಟೊಗಳನ್ನುತೆಗೆಯುತ್ತಿದ್ದರು ಆದರೆ ಪೋಟೊಗಳನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ಇರುತ್ತದೆ ಹಾಗೂ ಪೋಟೊ ತೆಗೆದಿರುತ್ತಾರೆ ಮೈದಾನ ಇರುತ್ತದೆ ಎಂದು ನುಡಿದಿರುತ್ತಾರೆ. ಪೋಲಿಸರು ನ್ಯಾಯಾಲಯಕ್ಕೆ ಪೋಟೊ ಹಾಜರು ಮಾಡಿಲ್ಲ ನಾನು ಸಹ ಪೊಟೊ ತೆಗೆದು ನೀಡಿರುತ್ತೇನೆ ಅವರು ಹಾಜರು ಮಾಡಿಲ್ಲ ಎಂದು ನುಡಿದಿರುತ್ತಾರೆ.

ಶಾಲೆಯ ಪಶ್ಚಿಮಕ್ಕೆ ಇದ್ಗಾ ಮೈದಾನ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ ಪಂಪ ಇದೆ, ದಕ್ಷಿಣಕ್ಕೆ ಮನೆಗಳು ಇರುತ್ತವೆ ಎಂದರೆ ಸರಿ. ನಾನು ಹೇಳಿದ ಘಟನಾ ಸ್ಥಳದ ಚೆಕ್ಕಬಂದಿ ಹೊಂದಾಣಿಕೆ ಇರುವುದಿಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮಗ ಆಟ ಆಡುವಾಗ ಬಿದ್ದು ಪೆಟ್ಟು ಮಾಡಿಕೊಂಡು ಆರೋಪಿಯ ಮೇಲೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿಕ್ಷಕರು ನನಗೆ ಅಪಘಾತ ವಿಷಯ ತಿಳಿಸಿಲ್ಲ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ

ಜೆ ಎಂ ಎಫ್ ಸಿ, ಸಿಂದಗಿ.